**JULY 06, 2024**

**AKASHAVANI - DHARWAD**

**PRADESH SAMACHARA (KANNADA) 7:05 AM**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ಡೆಂಘೀ ಜ್ವರ ಸೊಳ್ಳೆಗಳ ನಾಶಕ್ಕೆ, ರಾಜ್ಯವ್ಯಾಪಿ ಜನ ಜಾಗೃತಿ ಅಭಿಯಾನ ಆರಂಭ – ದಿನೇಶ್ ಗುಂಡೂರಾವ್.
- ವಿಜಯಪುರ ಜಿಲ್ಲೆ ತಾಳಿಕೋಟೆಯಲ್ಲಿ, ನೀತಿ ಆಯೋಗದ ಸಂಪೂರ್ಣತಾ ಅಭಿಯಾನಕ್ಕೆ ಚಾಲನೆ.
- ಕಲಬುರಗಿ, ರಾಯಚೂರು ಸೇರಿದಂತೆ 11 ಜಿಲ್ಲೆಗಳಲ್ಲಿ, ಭೋವಿ ಅಭಿವೃದ್ಧಿ ನಿಗಮದ ಕಚೇರಿ ಪ್ರಾರಂಭಿಸಲು, ಚಿಂತನೆ – ಎಸ್. ರವಿಕುಮಾರ.
- ಉತ್ತರಕನ್ನಡ ಜಿಲ್ಲೆಯಲ್ಲಿ ವ್ಯಾಪಕ ಮಳೆ; ಏಳು ಕಾಳಜಿ ಕೇಂದ್ರಗಳಲ್ಲಿ ಪುನರ್ವಸತಿಗೆ ಸಿದ್ಧತೆ.
- ಹುಬ್ಬಳ್ಳಿಯಲ್ಲಿ ಇಂದು ಮತ್ತು ನಾಳೆ, ಹಲಸಿನ ಹಬ್ಬ.

<><><>

ಈಗ ವಾರ್ತೆಗಳ ವಿವರ

<><><>

ಡೆಂಘಿ ಜ್ವರ ನಿಯಂತ್ರಿಸಲು, ಈಡೀಸ್ ಸೊಳ್ಳೆಗಳ ಉತ್ಪತ್ತಿ ತಾಣಗಳನ್ನು ನಾಶಪಡಿಸಲು, ಪ್ರತಿ ಶುಕ್ರವಾರ ಆರೋಗ್ಯ ಇಲಾಖೆ, ಅಭಿಯಾನ ಕೈಗೊಳ್ಳಲಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್, ತಿಳಿಸಿದ್ದಾರೆ. ಡೆಂಘಿ ಜ್ವರ ತರುವ ಸೊಳ್ಳೆಗಳ ನಾಶಕ್ಕೆ ರಾಜ್ಯವ್ಯಾಪಿ ಜಾಗೃತಿ ಅಭಿಯಾನಕ್ಕೆ, ಸಚಿವರು ಮಂಗಳೂರಿನಲ್ಲಿ ಚಾಲನೆ ನೀಡಿ, ಮಾತನಾಡಿದರು. ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಬೇಕು. ಜನ ತಮ್ಮ ಮನೆಯ ಸುತ್ತಮುತ್ತಲ ಸ್ಥಳಗಳಲ್ಲಿ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ತೀವ್ರ ಜ್ವರ ಕಂಡು ಬಂದಲ್ಲಿ ಕೂಡಲೇ ಪರೀಕ್ಷೆ ಮಾಡಿಸಿಕೊಂಡು, ಸಕಾಲಿಕ ಚಿಕಿತ್ಸೆ ಪಡೆದುಕೊಳ್ಳುವಂತೆ, ಅವರು ಕೋರಿದರು.

<><><>

‘ಈಡಿಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶಮಾಡುವ ದಿನ’ ಕಾರ್ಯಕ್ರಮ, ಶುಕ್ರವಾರ, ರಾಯಚೂರು, ಚಿಕ್ಕಬಳ್ಳಾಪುರ, ಧಾರವಾಡದ ಕೆಲಗೇರಿ ಗ್ರಾಮ, ಶಿವಮೊಗ್ಗ ನಗರ, ಚಿತ್ರದುರ್ಗ ಹಾಗೂ ಮಂಗಳೂರಿನ ಕೋಡಿಕಲ್‌ನಲ್ಲಿ, ನಡೆಯಿತು.

<><><>

ವಿಜಯಪುರ ಜಿಲ್ಲೆ ತಾಳಿಕೋಟೆಯಲ್ಲಿ, ಕೇಂದ್ರ ನೀತಿ ಆಯೋಗದ ಆರೋಗ್ಯ ಪೋ ‘ಣೆ ಹಾಗೂ ಕೃಷಿ ಸಂಬಂಧಿತ 90 ದಿನಗಳ ಸಂಪೂರ್ಣತಾ ಅಭಿಯಾನಕ್ಕೆ, ಚಾಲನೆ ನೀಡಲಾಗಿದೆ. ಕೇಂದ್ರ ಸರ್ಕಾರದ ಆಶಯೋತ್ತರ ತಾಲೂಕುಗಳಲ್ಲಿ, ಆರು ಪ್ರಮುಖ ಕಾರ್ಯಕ್ಷಮತೆ ಸೂಚಕಗಳನ್ನಾಧರಿಸಿ, ಮುಂದಿನ ಮೂರು ತಿಂಗಳ ಅವಧಿಯಲ್ಲಿ 100 ರ ‍್ಟ ಪ್ರಗತಿ ಸಾಧಿಸುವ ಗುರಿ ಹೊಂದಲಾಗಿದೆ ಎಂದು ಜಿಲ್ಲಾಧಿಕಾರಿ ಟಿ.ಭೂ ಬಾಲನ್ ತಿಳಿಸಿದರು.

<><><>

ಜಿಲ್ಲಾ ಪಂಚಾಯಿತಿ ಸಿ.ಇ.ಒ. ರಿಷಿ ಆನಂದ್ ಮಾತನಾಡಿ, ತಾಳಿಕೋಟೆ ತಾಲೂಕನ್ನು ಆಶಯ ತಾಲೂಕು ಎಂದು ಆಯ್ಕೆ ಮಾಡಲಾಗಿದೆ. ಆರೋಗ್ಯ, ಶಿಕ್ಷಣ, ಮೂಲ ಸೌಲಭ್ಯ, ನೀರಾವರಿ ಸೇರಿದಂತೆ, ವಿವಿಧ ಕ್ಷೇತ್ರಗಳಲ್ಲಿ, ಜನರ ಜೀವನ ಮಟ್ಟವನ್ನು ಉತ್ತಮ ಪಡಿಸುವ ಉದ್ದೇಶವನ್ನು, ಈ ಯೋಜನೆ ಹೊಂದಿದೆ. ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಆರಂಭವಾಗಿದೆ ಎಂದರು.

<><><>

ಹುಬ್ಬಳ್ಳಿಯ ಪೂಜ್ಯ ಶ್ರೀ ಸಿದ್ಧಾರೂಢರ ಭಾವಚಿತ್ರವಿರುವ ಅಂಚೆ ಚೀಟಿಯನ್ನು, ಭಾರತೀಯ ಅಂಚೆ ಇಲಾಖೆ ಹೊರತಂದಿದ್ದು, ಇಂದು ಸಂಜೆ 6 ಗಂಟೆಗೆ, ಶ್ರೀ ಮಠದ ಶ್ರೀ ಆರೂಢ ಸಭಾಂಗಣದಲ್ಲಿ, ಗಣ್ಯರು ಬಿಡುಗಡೆ ಮಾಡಲಿದ್ದಾರೆ. ಕಳೆದ 25 ವರ್ಷಗಳ ಸತತ ಪರಿಶ್ರಮದ ಫಲವಾಗಿ, ಭಕ್ತಾದಿಗಳ ಬಯಕೆ, ಇಂದು ಈಡೇರುತ್ತಿದೆ. ಹಿಂಭಾಗದಲ್ಲಿ ಪಚ್ಚೆ ಹಸಿರಿನ ಬಣ್ಣ, ಶ್ರೀ ಸಿದ್ಧಾರೂಢರು ಮಾಲೆ ಧರಿಸಿ ಪೀಠಾಸೀನರಾದ ಭಾವಚಿತ್ರವುಳ್ಳ, 5 ರೂಪಾಯಿ ಮುಖಬೆಲೆಯ ಅಂಚೆ ಚೀಟಿ ಇದಾಗಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸದ್ಗುರು ಶ್ರೀ ಸಿದ್ಧಾರೂಢ ಮಠದ ಕಾರ್ಯಾಧ್ಯಕ್ಷ ಬಸವರಾಜ ಕಲ್ಯಾಣಶೆಟ್ಟರ್.

<><><>

ಚೇರ್ಮನ್ ಶ್ರೀ ಬಸವರಾಜ ಕಲ್ಯಾಣ ಶೆಟ್ಟರ್ ಧ್ವನಿ 45 ಸೆಕೆಂದುಗಳು

<><><>

ಕಲಬುರಗಿ, ರಾಯಚೂರು, ಧಾರವಾಡ, ಬಳ್ಳಾರಿ, ಮತ್ತು ಶಿವಮೊಗ್ಗ ಸೇರಿದಂತೆ 11 ಜಿಲ್ಲೆಗಳಲ್ಲಿ, ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಪ್ರತ್ಯೇಕ ಜಿಲ್ಲಾ ವ್ಯವಸ್ಥಾಪಕರ ಕಚೇರಿಗಳನ್ನು ಆರಂಭಿಸಲು, ಯೋಜಿಸಲಾಗಿದೆ ಎಂದು, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್. ರವಿಕುಮಾರ ಕಲಬುರಗಿಯಲ್ಲಿ ತಿಳಿಸಿದ್ದಾರೆ. ಕನ್ನಡ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲ್ಲು ಒಡೆಯುವ ಕಾಯಕ, ಭೋವಿ ಸಮಾಜದ ಕುಲ ಕಸುಬು. ಕಲಬುರಗಿ ಜಿಲ್ಲೆಯಲ್ಲಿ 2 ಲಕ್ಷ ಭೋವಿ ಜನಾಂಗದವರಿದ್ದಾರೆ. ಜೊತೆಗೆ, ಪರಿಶಿಷ್ಟ ಪಂಗಡಕ್ಕೆ ಸೇರಿದ 8 ಉಪ ಜಾತಿಗಳನ್ನು ಸಹ, ಭೋವಿ ಅಭಿವೃದ್ಧಿ ನಿಗಮದ ಯೋಜನೆಗಳ ಸದುಪಯೋಗ ಪಡೆಯಲು ಗುರುತಿಸಲಾಗಿದೆ ಎಂದರು.

<><><>

ಶಿವಮೊಗ್ಗ ಜಿಲ್ಲೆ, ಭದ್ರಾವತಿಯ ವಿಶ್ವೇಶ್ವರಾಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ, ವಿ.ಆಯ್.ಎಸ್.ಎಲ್. ಬೆಂಗಳೂರಿನ ಹಿಂದೂಸ್ಥಾನ್ ಮಷೀನ್ ಟೂಲ್ಸ್ ಲಿಮಿಟೆಡ್ – ಎಚ್.ಎಂ.ಟಿ.

ಸೇರಿದಂತೆ, ಸಾರ್ವಜನಿಕ ವಲಯದ ಉದ್ಯಮಗಳನ್ನು ಪುನಃಶ್ಚೇತನಗೊಳಿಸಿ, ಯುವಜನರಿಗೆ ಉದ್ಯೋಗ ಕಲ್ಪಿಸಲು, ಆದ್ಯತೆ ನೀಡಲಾಗುವುದು ಎಂದು, ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದ್ದಾರೆ. ಮಂಡ್ಯದಲ್ಲಿ ಜನತಾ ದರ್ಶನ ನಡೆಸಿ, ಅವರು ಮಾತನಾಡಿದರು. ತಮ್ಮ ಬೃಹತ್ ಕೈಗಾರಿಕೆ ಮತ್ತು ಉಕ್ಕು ಇಲಾಖೆ ವ್ಯಾಪ್ತಿಗೆ ಬರುವ, ಹಲವು ಸಾರ್ವಜನಿಕ ವಲಯದ ಉದ್ದಿಮೆಗಳು ಮುಚ್ಚುವ ಹಂತದಲ್ಲಿವೆ. ಅವುಗಳಿಗೆ ಮರುಜೀವ ನೀಡುವ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದರು.

<><><>

ಉತ್ತರಕರ್ನಾಟಕ, ಕರಾವಳಿ ಮತ್ತು ಮೈಸೂರು ವಲಯದ ವಿಭಿನ್ನ ಬಗೆಯ ತಿಂಡಿ–ತಿನಿಸುಗಳನ್ನು, ರಾಜ್ಯಾದ್ಯಂತ ಇಂದಿರಾ ಕ್ಯಾಂಟಿನ್‌ಗಳಲ್ಲಿ ತಯಾರಿಸಲಾಗುವುದು ಎಂದು, ಪೌರಾಡಳಿತ ಖಾತೆ ಸಚಿವ ರಹೀಮ್ ಖಾನ್ ತಿಳಿಸಿದ್ದಾರೆ. ಚಾಮರಾಜನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿ, ಪ್ರದೇಶವಾರು ಬಳಕೆಯ ಆಹಾರ ಸಿದ್ಧಪಡಿಸಲು ಸದ್ಯದಲ್ಲೇ ಕ್ರಮ ಕೈಗೊಳ್ಳಲಾಗುವುದು. ಇಂದಿರಾ ಕ್ಯಾಂಟೀನ್‌ಗಳ ಸುಧಾರಣೆಗೆ 50 ಕೋಟಿ ರೂಪಾಯಿ ಅನುದಾನ ಮೀಸಲಿಡಲಾಗಿದೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಉತ್ತರಕನ್ನಡ ಜಿಲ್ಲೆಯಲ್ಲಿ, ಸತತ ಮಳೆಯ ಹಿನ್ನೆಲೆ, ರಾಷ್ಟ್ರೀಯ ವಿಪತ್ತು ನಿರ್ವಹಣೆಯ ಎರಡು ತಂಡಗಳು, ಪ್ರವಾಹ ಪರಿಸ್ಥಿತಿ ನಿಯಂತ್ರಿಸಲು ಆಗಮಿಸಲಿವೆ ಎಂದು, ನಿರ್ಗಮಿತ ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊನ್ನಾವರ, ಕುಮಟಾ ಮತ್ತು ಅಂಕೋಲಾ ತಾಲೂಕು ವ್ಯಾಪ್ತಿಯಲ್ಲಿ, ವಿವಿಧ ಗ್ರಾಮಗಳ ಸಾರ್ವಜನಿಕರನ್ನು, ಸ್ಥಳಾಂತರಿಸಿದ್ದು, ಏಳು ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಕಲ್ಪಿಸಲಾಗಿದೆ. 1–0–7–7 ತುರ್ತು ಸಹಾಯವಾಣಿ ಆರಂಭಿಸಲಾಗಿದೆ ಎಂದರು.

ಕಾರವಾರ, ಕುಮಟಾ ಮತ್ತು ಅಂಕೋಲಾ ಭಾಗದಲ್ಲಿ, ಪ್ರವಾಹ ಪರಿಸ್ಥಿತಿ ನಿಯಂತ್ರಿಸಲು, ಎನ್.ಡಿ.ಆರ್.ಎಫ್. ನ ಎರಡು ತಂಡಗಳನ್ನು, ಅಗತ್ಯ ರಕ್ಷಣಾ ಸಾಧನಗಳೊಂದಿಗೆ, ತುರ್ತು ಕಾರ್ಯಾಚರಣೆಗೆ ಅಣಿಗೊಳಿಸಲಾಗಿದೆ ಎಂದರು.

<><><>

ಉಡುಪಿ ಜಿಲ್ಲೆಯಾದ್ಯಂತ, ಮುಂದಿನ 5 ದಿನಗಳ ವರೆಗೆ, ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು, ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

<><><>

ಮಹಾರಾಷ್ಟ್ರ ಘಟ್ಟ ಪ್ರದೇಶದಲ್ಲಿ ಸುರಿಯುತ್ತಿರುವ ಸತತ ಮಳೆಯಿಂದಾಗಿ, ಬೆಳಗಾವಿ ಜಿಲ್ಲೆಯ ಕೃಷ್ಣ ನದಿ ಸೇರಿದಂತೆ, ದೂಧ ಗಂಗಾ, ವೇದ ಗಂಗಾ, ಪಂಚ ಗಂಗಾ, ಘಟಪ್ರಭಾ, ಮಲಪ್ರಭಾ ಹಾಗೂ ಮಾರ್ಖಂಡೇಯ ನದಿಗಳು, ಮೈದುಂಬಿ ಹರಿಯುತ್ತಿವೆ. ಖಾನಾಪುರ, ಕಣಕುಂಬಿ, ಜಾಂಬೋಟಿ, ನಾಗರಗಾಳಿ, ಭೀಮಗಡ ಮತ್ತು ಲೋಂಡಾ ಅರಣ್ಯ ಪ್ರದೇಶದಲ್ಲಿ, ಸತತ ಮಳೆ ಸುರಿಯುತ್ತಿದೆ. ನಿರಂತರ ಮಳೆ ಹಾಗೂ ಮೈ ದುಂಬಿದ ನದಿಗಳ ಬಗ್ಗೆ, ಜಿಲ್ಲಾಡಳಿತ ಮುನ್ನೆಚ್ಚರಿಕೆ ವಹಿಸಿದ್ದು, ಪ್ರವಾಹ ಪರಿಸ್ಥಿತಿ ಎದುರಿಸಲು ಸಜ್ಜಾಗಿದೆ.

<><><>

‘ಸಾವಯವ ಮತ್ತು ಹಲಸಿನ ಹಬ್ಬ’ ಇಂದು ಮತ್ತು ನಾಳೆ ಹುಬ್ಬಳ್ಳಿಯ ಮೂರು ಸಾವಿರ ಮಠದ ಮೂಜಗಂ ಸಭಾಭವನದಲ್ಲಿ ಆಯೋಜಿತವಾಗಿದೆ. 10ಕ್ಕೂ ಹೆಚ್ಚು ವಿಶೇಷ ತಳಿಯ ಸಾವಯವ ಹಲಸುಗಳ ಪ್ರದರ್ಶನ, ಸಸಿಗಳ ಮಾರಾಟ ಹಾಗೂ ಹಲಸಿನ ಉತ್ಪನ್ನಗಳ ಪ್ರದರ್ಶಿನಿ ಆಯೋಜಿತವಾಗಿದೆ. ರೈತ ಮಹಿಳೆಯರಿಂದ ಸಂಚಾಲಿತ, 15ಕ್ಕೂ ಹೆಚ್ಚು ರೈತ ಉತ್ಪಾದಕರ ಕಂಪೆನಿಗಳು ಭಾಗವಹಿಸಲಿವೆ. ಪ್ರದೇಶ ಸಮಾಚಾರಕ್ಕಾಗಿ ಈ ಕುರಿತು ಹೆಚ್ಚಿನ ಮಾಹಿತಿ ನೀಡಿದ್ದಾರೆ, ಮೈಸೂರಿನ ಸಹಜ ಸಮೃದ್ಧದ ಕಾರ್ಯಕ್ರಮ ಸಂಯೋಜಕ, ಸಿ.ಶಾಂತಕುಮಾರ್.

<><><>

ಸಿ.ಶಾಂತಕುಮಾರ್ ಧ್ವನಿ 45 ಸೆಕೆಂದುಗಳು

<><><>

ಮಣ್ಣೆತ್ತಿನ ಅಮಾವಾಸ್ಯೆಯನ್ನು ಶುಕ್ರವಾರ, ರೈತಾಪಿ ಜನ ಶ್ರದ್ಧಾ ಭಕ್ತಿಯಿಂದ ಆಚರಿಸಿದರು. ತಮ್ಮ ಕೃಷಿ ಬದುಕಿಗೆ ಆಸರೆಯಾಗಿರುವ ಎತ್ತುಗಳನ್ನು ಪೂಜಿಸಿ, ಸಂಭ್ರಮಿಸಿದರು. ವರ್ಷಾರಂಭದಿಂದ ಒಟ್ಟು ಐದು ಬಾರಿ ಮಣ್ಣಿನ ಪೂಜೆಯನ್ನು ನೆರವೇರಿಸುವ ಸಂಪ್ರದಾಯ ಉತ್ತರ ಕರ್ನಾಟಕ ಭಾಗದ ಗ್ರಾಮೀಣ ಜನಪದರಲ್ಲಿದೆ.

<><><>

ಬಸವಣ್ಣನವರ ಆದರ್ಶಗಳನ್ನು, ಯುವ ಪೀಳಿಗೆಗೆ ತಲುಪಿಸುವ ಉದ್ದೇಶದಿಂದ, ‘ಸಾಂಸ್ಕೃತಿಕ ನಾಯಕ ಬಸವಣ್ಣ’ ವಿ ’ಯ ಕುರಿತ, ರಾಷ್ಟ್ರೀಯ ವಿಚಾರ ಸಂಕಿರಣ, ಇಂದು ಹಾವೇರಿಯ ಕೆ.ಎಲ್.ಇ. ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಜರುಗಲಿದೆ. ಹಾವೇರಿ ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊಫೆಸರ್ ಸುರೇಶ ಜಂಗಮಶೆಟ್ಟಿ, ಹಾವೇರಿಯಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

<><><>

ಯಕ್ಷಗಾನದ ಖ್ಯಾತ ಕಲಾವಿದ ಕುಂಬಳೆ ಶ್ರೀಧರ ರಾವ್ ಮಂಗಳೂರಿನಲ್ಲಿ ನಿಧನರಾದರು. ಅವರಿಗೆ 76 ವರ್ಷ ವಯಸ್ಸಾಗಿತ್ತು. ಕೂಡ್ಲು, ಮೂಲ್ಕಿ, ಇರಾ, ಕರ್ನಾಟಕ, ಧರ್ಮಸ್ಥಳ, ಮೊದಲಾದ ಯಕ್ಷಗಾನ ಮೇಳಗಳಲ್ಲಿ 6 ದಶಕಗಳಿಗೂ ಹೆಚ್ಚು ಕಾಲ, ತೆಂಕುತಿಟ್ಟಿನ ಕಲಾಸೇವೆಯನ್ನು ಅವರು ಮಾಡಿದ್ದಾರೆ. ತಾಳಮದ್ದಲೆ ಅರ್ಥಧಾರಿಯೂ ಆಗಿದ್ದ ಕುಂಬಳೆ ಶ್ರೀಧರರಾವ್, ಮೂಲತಃ ಕಾಸರಗೋಡು ಜಿಲ್ಲೆ ಕುಂಬಳೆಯವರು. ಅವರು ಪ್ರಸ್ತುತ, ಪುತ್ತೂರು ತಾಲೂಕಿನ, 34 ನೆಕ್ಕಿಲಾಡಿ ಗ್ರಾಮದ ಶಾಂತಿನಗರ ಸಮೀಪದ, ಬೆರಿಕೆ ನಿವಾಸಿಯಾಗಿದ್ದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಹಸಿರು ಕ್ರಾಂತಿ ಹರಿಕಾರ, ಬಾಬು ಜಗಜೀವನರಾಮ್ ಅವರ ಪುಣ್ಯತಿಥಿ ಅಂಗವಾಗಿ, ಇಂದು ಬೆಳಗ್ಗೆ 10.30ಕ್ಕೆ ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆ ಆವರಣದ ಪ್ರತಿಮೆಗೆ, ಮಹಾಪೌರರು ಗೌರವಾರ್ಪಿಸಲಿದ್ದಾರೆ.

<><><>

ಸ್ವತಂತ್ರ ಭಾರತದ ಪ್ರಥಮ ಕೈಗಾರಿಕಾ ಮಂತ್ರಿ, ಶಾಮಾಪ್ರಸಾದ್ ಮುಖರ್ಜಿ ಅವರ ಜಯಂತಿ ಅಂಗವಾಗಿ, ಇಂದು ಬಿಜೆಪಿ ರಾಜ್ಯಾದ್ಯಂತ ಗೌರವ ನಮನ ಸಲ್ಲಿಸಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಡೆಂಘೀ ಜ್ವರ ಸೊಳ್ಳೆಗಳ ನಾಶಕ್ಕೆ, ರಾಜ್ಯವ್ಯಾಪಿ ಜನ ಜಾಗೃತಿ ಅಭಿಯಾನ ಆರಂಭ – ದಿನೇಶ್ ಗುಂಡೂರಾವ್.**
- **ವಿಜಯಪುರ ಜಿಲ್ಲೆ ತಾಳಿಕೋಟೆಯಲ್ಲಿ, ನೀತಿ ಆಯೋಗದ ಸಂಪೂರ್ಣತಾ ಅಭಿಯಾನಕ್ಕೆ ಚಾಲನೆ.**
- **ಕಲಬುರಗಿ, ರಾಯಚೂರು ಸೇರಿದಂತೆ 11 ಜಿಲ್ಲೆಗಳಲ್ಲಿ, ಭೋವಿ ಅಭಿವೃದ್ಧಿ ನಿಗಮದ ಕಚೇರಿ ಪ್ರಾರಂಭಿಸಲು, ಚಿಂತನೆ – ಎಸ್. ರವಿಕುಮಾರ.**
- **ಉತ್ತರಕನ್ನಡ ಜಿಲ್ಲೆಯಲ್ಲಿ ವ್ಯಾಪಕ ಮಳೆ; ಏಳು ಕಾಳಜಿ ಕೇಂದ್ರಗಳಲ್ಲಿ ಪುನರ್ವಸತಿಗೆ ಸಿದ್ಧತೆ.**
- **ಹುಬ್ಬಳ್ಳಿಯಲ್ಲಿ ಇಂದು ಮತ್ತು ನಾಳೆ, ಹಲಸಿನ ಹಬ್ಬ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**